# ಏನನಿತ್ತು ಮೆಚ್ಚಿಸುವೆನು ಏನೋ ವಿಠಲ

1. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchhu Rayaru.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
3. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao
4. **Note:** The lyrics given without any highlights as per Ref. 1. The lyrics as per Ref.2 are similar to Ref. 1 with few differences, which are given in yellow highlights.
5. **Note:** The wordings followed by the singer are as per Ref. 2.

ರಾಗ ಮೋಹನ ಆದಿ ತಾಳ

ಏನನಿತ್ತು ಮೆಚ್ಚಿಸುವೆನೊ ಏನೊ ವಿಠ್ಠಲ || ಪ ||
ಮಾನಿನಿ ಸಿರಿಯರಸ ನಿನ್ನ ನಾಮವನ್ನೇ ನೆನೆವೆನಯ್ಯ || ಅಪ ||
(ದೀನ ರಕ್ಷಕನೆ ನಿನ್ನ ಧ್ಯಾನವೇನೊ ವಿಠ್ಠಲ)

ಓದಿ ನಿನ್ನ ಮೆಚ್ಚಿಸುವೆನೆ
ವೇದವನ್ನು ಅಜನಿಗಿತ್ತೆ (ವೇದವ ತಂದಜನಿಗಿತ್ತೆ)
ವಾದಿಸಿ ನಿನ್ನ ಮೆಚ್ಚಿಸುವೆನೆ
ಆದಿಶೇಷ ಶಯನನೆ || 1 ||

ಆಡಿ ನಿನ್ನ ಮೆಚ್ಚಿಸುವೆನೆ
ಮೃಡನಯ್ಯನಯ್ಯನೆ
ಪಾಡಿ ನಿನ್ನ ಮೆಚ್ಚಿಸುವೆನೆ
ಪವನಜನೊಡೆಯನೆ || 2 ||
(ಪವನಜನ ಸ್ವಾಮಿ ನೀನೆ)

ಚಿನ್ನವಿತ್ತು ಮೆಚ್ಚಿಸುವೆನೆ
(ಸಿರಿ ದೇವಿ ರಮಣನೆ) (ಸಿರಿ ದೇವಿಯರಸನೆ)
ಪೂರ್ಣಾನಂದ (ಜ್ಞಾನಿ) (ಸ್ವಾಮಿ) ನೀನೆ
ಪುರಂದರ (ವಿಠ್ಠಲಯ್ಯ) (ವಿಠ್ಠಲ ನಿನ್ನ) || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ಅಲ್ಪಜ್ಞನೂ, ಅಲ್ಪಶಕ್ತನೂ, ಅಲ್ಪಾಂಶನೂ, ಪರಾಧೀನನೂ ಆದ ಜೀವವು ಸರ್ವಜ್ಞನೂ, ಸರ್ವಶಕ್ತನೂ, ಅಂಶಿಯೂ, ಸ್ವತಮತ್ರನೂ ಆದ ಪರಮಾತ್ಮನಿಗೆ ಏನನ್ನು ತಾನೆ ಸಲ್ಲಿಸಿ ಮೆಚ್ಚಿಸಬಹುದು? ಧ್ಯಾನವೊಂದೇ ಜೀವಕ್ಕೆ ಸಾಧ್ಯವಾದುದು. ಆದರೆ ಅದಕ್ಕೆ ಬೇಕಾಗುವ ಮನಃಪ್ರಾವಣ್ಯವನ್ನೂ ಬಲವನ್ನೂ ಪರಮಾತ್ಮನೇ ಕೊಡಬೇಕು.

**ಓದಿ...** – ವೇದ ವಿದ್ಯೆಯಲ್ಲಿ ತೊಡಗಿ; ವೇದವನ್ನು ಮೊಟ್ಟಮೊದಲು ಪಡೆದುಕೊಂಡ ಬ್ರಹ್ಮನೇ ಅವನಿಗೆ ಮಗ; ಎಂದಮೇಲೆ ಬೇರೆ ಯಾವನು ತನ್ನ ವೇದ ಪಾಂಡಿತ್ಯದಿಂದ ಅವನನ್ನು ಬೆರಗುಗೊಳಿಸಲು ಸಾಧ್ಯ?

**ವಾದಿಸಿ...** – ಆದಿಶೇಷನು ತನ್ನ ಸಾವಿರ ಹೆಡೆಗಳಿಂದ ವಿಷ್ಣು ಸರ್ವೋತ್ತಮತ್ವವನ್ನು ಸಾರುತ್ತ, ಅದರ ವಿರುದ್ಧ ವಾದಿಸುವವರ ಬಾಯಿಕಟ್ಟುವನೆಂದು ಪ್ರತೀತಿ.

**ಆಡಿ...** – ನಾಟ್ಯವಾಡಿ;

**ಮೃಡನೆಂದರೆ** ಶಿವ, ನಟರಾಜ; ವಿಷ್ಣುವಿಗೆ ಮಗನ ಮಗ (ಬ್ರಹ್ಮನ ಮಗ).

**ಮೃಡನಯ್ಯನಯ್ಯ** = ವಿಷ್ಣು, ಶ್ರೀ ಹರಿ

**ಪಾಡಿ...** – ಹಾಡಿ, ಹನುಮಂತನು ಸಂಕೀರ್ತನ ಪದ್ಧತಿಯ ಪ್ರವರ್ತಕ; ಸಂಗೀತ ಶಾಸ್ತ್ರದಲ್ಲಿ ಪರಂಪರೆಯನ್ನು ಸ್ಥಾಪಿಸಿದವನು.

**ಪವನಜನ ಒಡೆಯನೆ** = ಹನುಮಂತನ ಒಡೆಯ, ಹನುಮಂತನು ಸಂಗೀತ ಶಾಸ್ತ್ರದಲ್ಲಿ ನಿಪುಣನು. ಈತನು ರಚಿಸಿದ ಸಂಗೀತ ರತ್ನಾಕರಕಾರನು ಉದಾಹರಿಸಿದ್ದಾನೆ. ಅಂಥಹವನ ಒಡೆಯನಾದ ನಿನ್ನನ್ನು ಹೇಗೆ ಹಾಡಿ ಮೆಚ್ಚಿಸಲಿ

**Classification:** Keerthane
**Ankita:** purandara vittala

**Location:** NA

**Category:** Bhakti

**Sub-Category:** arasa, dhyana, shesha, hanuma, bangara, devi, purna, veda, brahma, shiva, Lakshmi, purna, Ananda,

**Pravachana:** NA

**Explanation:** NA